ಹೋಯಿತೆಂದು ಹಾರಾಡಿದ್ದರು. ಅಂತೆಯೇ ಅವಕಾಶಕ್ಕಾಗಿ ಕಾಯುತ್ತಿದ್ದ ಅವರಿಗೆ ಮಠದಲ್ಲಿನ ಅವಳ ವ್ಯವಹಾರ ದೊಡ್ಡ ನೆವದಂತೆ ಕಂಡಿತು. ಮರುದಿನವೇ ಅವಳ ಬಟ್ಟೆ ಬರೆಯನ್ನೆಲ್ಲ ಶಾರದೆಯ ದೊಡ್ಡ ಮಾವ ಗಂಟು ಮೂಟೆ ಸಮೇತ ಹೊರಗೆ ಎಸೆದೇ ಬಿಟ್ಟ. ಉಳಿದವರು ಸುಮ್ಮನೆ ಕೈ ಕಟ್ಟಿ ನಿಂತರು. ಆಕೆ ಅಸಹಾಯಕಳಂತೆ ಬಿಕ್ಕಿದಳು. ಮನೆಯ ಎಲ್ಲರ ಕಾಲುಗಳನ್ನು ಹಿಡಿದಳು. ಯಾರೊಬ್ಬರೂ ಕರಗಲಿಲ್ಲ. ಸಮಸ್ಯೆಯೊಂದು ಸಲೀಸಾಗಿ ಹೋದರೆ ಸಾಕು ಎನ್ನುವಂತಿತ್ತು ಅವರ ವರ್ತನೆ. ಅಂತೂ ಆ ಮನೆಯಿಂದ ಹೊರಬಿದ್ದಳು. ಅವಳ ಮೊಂಡು ಹಟಮಾರಿ ಬಾಯಿಯ ದೆಸೆಯಿಂದಾಗಿ ಯಾರೊಬ್ಬರೂ ಅವಳನ್ನು ಹತ್ತಿರ ಸೇರಿಸಲಿಲ್ಲ. ಅಲ್ಲದೆ ಗುರು ನಿಂದೆ ಮಾಡಿದವಳಿಗೆ ತಕ್ಕ ಶಾಸ್ತಿಯಾಗಲೇ ಬೇಕು ಎನ್ನುವ ಭಯಂಕರ ಭಕ್ತಿ ಆ ಊರಿನ ಸರ್ವ ಸಭ್ಯ ಗೃಹಸ್ಥರಿಗೂ ಇತ್ತಾದ್ದರಿಂದ ಅವಳ ಪರಿಸ್ಥಿತಿ ತೀರಾ ನಾಜೂಕು ಎನ್ನುವಂತಾಯಿತು.

ಅಲ್ಲಿ ಇಲ್ಲಿ ಅವರಿವರ ಮನೆಯ ಬಾವಿಕಟ್ಟೆಯ ಹತ್ತಿರ ಕೊಟ್ಟಿಗೆಯ ಹತ್ತಿರ ಗೊಬ್ಬರದ ಗುಂಡಿಯ ಹತ್ತಿರ ಇರತೊಡಗಿದಳು. ಬ್ರಾಹ್ಮಣರ ಉಂಡು ಬಿಸುಟ ಬಾಳೆಎಲೆಯನ್ನು ಹೆಕ್ಕಿ ತಂದು ಉಂಡಳು. ದನ ಕರು ಮೀಯಿಸುವ ಕೆರೆ ನೀರು ಕುಡಿದಳು. ಊರ ತುಂಬ ಹರಕು ಬಟ್ಟೆಯ ಗಂಟು ಹಿಡಿದು ಅಲೆದಳು. ಚಿಂದಿ ರವಿಕೆಯಲ್ಲಿ ಇಣುಕುತ್ತಿದ್ದ ಮೊಲೆಗಳ ನೋಡಿ ತೇಕುವ ಕಣ್ಣುಗಳಿಗೆ ಮಣ್ಣು ತೂರಿ ಶಾಪ ಹಾಕಿದಳು. ದಿನಗಳು ಕಳೆದು ಹೋದವು. ತಿಂಗಳುಗಳು ಕೂಡ. ಅಲೆದು ಅಲೆದು ಸುಸ್ತಾದ ಆಕೆ ಜೀವ ಹಿಡಿಯಾಗತೊಡಗಿತು. ಊಟ ತಿಂಡಿ ಬಿಟ್ಟಳು; ನೀರು ಕುಡಿಯುವುದನ್ನೂ ಕೂಡ. ಯಾರೊಬ್ಬರು ಆ ಕಡೆ ತಿರುಗಿಯೂ ನೋಡುವ ವ್ಯವಧಾನ ತೋರಲಿಲ್ಲ. ಅವಳೇ ಸಾಕಿದ ಎರಡು ನಾಯಿಗಳು ಅವಳನ್ನು ಸುತ್ತುತ್ತ ಅವಳನ್ನು ಮೂಸುತ್ತಿದ್ದದ್ದು ಬಿಟ್ಟರೆ, ಮತ್ತಾವ ಮನುಷ್ಯ ಜೀವಗಳೂ ಬಳಿ ಸುಳಿಯುವ ಪ್ರಯತ್ನ ಮಾಡಲಿಲ್ಲ. ಅಷ್ಟೇ ಆಗಿ ಅವಳು ಅಲ್ಲಿಯೇ ಸತ್ತು ಹೋಗಿದ್ದರೂ ಯಾರೊಬ್ಬರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲವೋ ಏನೋ. ಆದರೆ ಒಂದು ದಿನ ದಲಿತರ ಕೇರಿಯ ಯುವಕನೊಬ್ಬ ರಸ್ತೆ ಮಧ್ಯೆದಲ್ಲಿ ಅನಾಥವಾಗಿ ಬಿದ್ದಿದ್ದ ಅವಳ ಸೆರಗನ್ನು ಸರಿ ಪಡಿಸಿ ನೀರು ಕುಡಿಸಿ ಆರೈಕೆ ಮಾಡಿಬಿಟ್ಟ. ಮಠದ ಮಂದಿಗೆ ಕುಂಡೆಯಲ್ಲಿ ಕುರು ಎದ್ದಂತಾಯಿತು. ಈ ಬೋಳಿ ಮುಂಡೆ ಇನ್ನೂ ಈ ಊರಿನಲ್ಲಿಯೇ ಇದ್ದರೆ ತಮ್ಮ ಜಾತಿಯ ಹಾಗೂ ಮಠದ ಮರ್ಯಾದೆ ಮೂರು ಪಾಲು ಮಾಡುವುದರಲ್ಲಿ ಅನುಮಾನವಿಲ್ಲ ಎಂದುಕೊಳ್ಳುತ್ತ ಊರಿನ ಸಮಸ್ತ ವಿದ್ವಾಂಸರೂ ಸೇರಿ ಅವಳನ್ನು ದೂರದ ಮೈಸೂರಿನ ಆಶ್ರಮವೊಂದಕ್ಕೆ ಸೇರಿಸಿಬಿಟ್ಟರು. ಅಲ್ಲಿಗೆ ಹೊಸಕೊಪ್ಪದ ತಲೆಬಿಸಿಯೊಂದು ಶಾಶ್ವತವಾಗಿ ಕಳಚಿಹೋಗಿತ್ತು.

ಇನ್ನು ಶಾರದೆಗೆ ಭಾಗೀಚಿಕ್ಕಿಯ ಬಗ್ಗೆ ತಿಳಿದಿರಲಿಲ್ಲವೆಂದೇನೂ ಅಲ್ಲ. ಸಣ್ಣವರಿದ್ದಾಗ ಅವರೇ ಭಾಗೀರಥಿಯನ್ನು 'ಬಾಯಿ ಚಿಕ್ಕಿ ಬಾಯಿ ಚಿಕ್ಕಿ' ಎಂದು ಕಿಚಾಯಿಸುತ್ತ ಓಡಾಡುತ್ತಿದ್ದರು. ಅವಳು ಯಾರನ್ನಾದರೂ ಬೈಯ್ಯುತ್ತ ನಿಂತರೆ ಇವರು ಬದಿಯಲ್ಲಿ ನಿಂತು ಅವಳನ್ನು ರೇಗಿಸುತ್ತಿದ್ದರು. ಸತಾಯಿಸುತ್ತಿದ್ದರು. ಮತ್ತಷ್ಟು ಉತ್ತೇಜಿಸಿ ಹಲ್ಲು ಕಿಸಿಯುತ್ತಿದ್ದರು. ಅವರಿವರ ಮೇಲೆ ಚಾಡಿ ಹೇಳಿ ಆಕೆ ಕೆಟ್ಟಾ ಕೊಳಕ ಬೈಯ್ಯುವುದನ್ನು ನೋಡುತ್ತ ಕಿಸಿ ಕಿಸಿ ನಗುತ್ತಿದ್ದರು. ಇಷ್ಟಾದರೂ ಅವಳು ಎಂದಿಗೂ ಮಕ್ಕಳನ್ನು ಬೈದವಳೇ ಅಲ್ಲ. ಇವರು ಎಷ್ಟೆಲ್ಲ ತೊಂದರೆ ಕೊಟ್ಟರೂ ಕೂಡ. ಇವರು ಅವಳ ಮಡಿ ಸೀರೆಯನ್ನು ಮುಟ್ಟಿ ಓಡಿ ಹೋದಾಗಲೂ, ಮುಟ್ಟಾಗಿ ಮೂಲೆಯಲ್ಲಿ ಕೂತ ದಿನ ಬೇಕಂತಲೇ ಆಚೀಚೆ ಅಡ್ಡಾಡಿ ಅವಳ ದಾರಿ ಅಡ್ಡಗಟ್ಟಿದರೆ ಅವಳು ನಗುತ್ತ, 'ತರ್ಲೇ ಮುಂಡೇವ ನನ್ನ ಯಾಕಿಂಗೆ ಗೋಳಾಡಿಸ್ತೀರೋ' ಎಂದು ಗೋಗರೆಯುತ್ತಿದ್ದದ್ದು ಬಿಟ್ಟರೆ ಒಂದು